ಹರಿಯುತ್ತಿತ್ತು. ಮಗುವನ್ನೂ, ಹಸುಗೂಸನ್ನೂ ಹೇಗೆ ಈ ನೀರಿನಿಂದ ರಕ್ಷಿಸುವುದು ಎಂಬುದೇ ದೊಡ್ಡ ಯಕ್ಷಪ್ರಶ್ನೆಯಾಗಿ ಪರಿಣಮಿಸಿತು. ನೀರಿನ ಹರಿವು ಕಡಿಮೆಯಾಗುವುದೇನೋ ನೋಡೋಣ ಎಂದು ಬಹಳ ಹೊತ್ತು ನದಿ ದಂಡೆಯಲ್ಲೇ ಕುಳಿತೆ. ಆದರೆ ಸಾಧ್ಯತೆ ಕಡಿಮೆಯಿತ್ತು. ಮತ್ತು ಶ್ರಾವಸ್ತಿಯನ್ನು ಸೇರುವ ವೇಳೆಗೆ ಕತ್ತಲಾಗಿಬಿಡುತ್ತದೆಯೆಂಬ ಆತಂಕವೂ ಎದುರಾಯಿತು. ಇಬ್ಬರನ್ನೂ ಹೇಗೆ ದಡ ಸೇರಿಸುವುದು ಎಂದು ಯೋಚಿಸಿದೆ. ನನಗೇನೋ ಈಜು ಬರುತ್ತಿದ್ದುದರಿಂದ ನೀರಿನ ಸೆಳೆತದ ಭಯವೇನೂ ನನಗಿರಲಿಲ್ಲ. ಆದರೆ ಎರಡೂ ಮಕ್ಕಳನ್ನೂ ಒಟ್ಟಿಗೇ ಕರೆದೊಯ್ದರೆ, ಒಂದು ವೇಳೆ ಆಯ ತಪ್ಪಿಬಿಟ್ಟರೆ ಎಂಬ ಅನುಮಾನವೂ ಕಾಡಿ ಒಬ್ಬೊಬ್ಬರನ್ನೇ ಕರೆದೊಯ್ಯುವುದು ಕ್ಷೇಮವೆಂದು ಭಾವಿಸಿದೆ.

ದೊಡ್ಡಮಗನನ್ನು ದಂಡೆಯಲ್ಲಿ ಕೂರಿಸಿ, ಹಸುಗೂಸನ್ನು ಆ ದಡಕ್ಕೆ ಸೇರಿಸಿ ನಿನ್ನನ್ನು ಬಂದು ಕರೆದೊಯ್ಯುತ್ತೇನೆ ಎಂದು ಅವನಿಗೆ ತಿಳಿಯುವಂತೆ ಹೇಳಿ ಕೂರಿಸಿದೆ. ಇಲ್ಲೇ ಕುಳಿತಿರಬೇಕು, ಯಾವುದೇ ಕಾರಣಕ್ಕೂ ಎಲ್ಲಿಯೂ ಹೋಗಕೂಡದು ಎಂಬ ಎಚ್ಚರಿಕೆಯನ್ನು ಕೊಟ್ಟೇ ನೀರಿಗಿಳಿದೆ. ಯಾವಾಗ ನೀರು ಕುತ್ತಿಗೆಯನ್ನೂ ಮೀರಿ ಹರಿಯಲಾರಂಭಿಸಿತೋ ಆಗ ಎರಡೂ ಕೈಗಳನ್ನು ಮೇಲೆತ್ತಿ ಮಗುವಿಗೆ ನೀರು ತಾಗದಂತೆ ನದಿಯನ್ನು ದಾಟಿಸಿದೆ. ಸದ್ಯ ಎಂದು ನಿಟ್ಟುಸಿರು ಬಿಟ್ಟು, ಎಳೇ ಮಗುವನ್ನು ದಡದಲ್ಲಿನ ಮೆತ್ತನೆಯ ಮರಳ ಮೇಲೆ ಮಲಗಿಸಿ, ತೆಳುವಾಗಿ ಬಟ್ಟೆ ಹೊದಿಸಿದೆ. ದೊಡ್ಡ ಮಗನನ್ನು ಕರೆತರಲು ನೀರಿಗಿಳಿದೆ. ನಾನು ಹೇಳಿದ ಹಾಗೆಯೇ ಕದಲದೇ ಆ ದಂಡೆಯಲ್ಲೇ ಕುಳಿತಿತ್ತು ಮಗು.

ಅರ್ಧನದಿ ದಾಟುವ ವೇಳೆಗೆ ಆಕಾಶದಲ್ಲಿ ಏನೋ ನೆರಳು ಹರಿದಾಡಿದಂತೆ ಭಾಸವಾಯಿತು. ಮತ್ತೆ ಮಳೆಯ ಪ್ರವರ ಆರಂಭವಾಯಿತೇನೋ ಎಂಬ ಆತಂಕದಿಂದ ತಲೆಯೆತ್ತಿ ನೋಡಿದೆ. ರಣಹದ್ದುಗಳು. ನಿನ್ನೆಯ ಮಳೆಗೆ ಯಾವುದೋ ಪ್ರಾಣಿ ಸತ್ತಿರಬಹುದು, ಅದನ್ನು ತಿಂದು ಆಕಾಶದಲ್ಲಿ ಗಿರಕಿ ಹೊಡೆಯುತ್ತಿದ್ದವು. ಅವುಗಳ ಮಧ್ಯೆಯೇ ಯಾರು ಅತಿ ಎತ್ತರಕ್ಕೆ ಹಾರುತ್ತಾರೆ ಎಂಬ ಸ್ಪರ್ಧೆ ಏರ್ಪಟ್ಟಂತೆ ಒಂದಕ್ಕಿಂತ ಒಂದು ಮೇಲೆ ವೃತ್ತಾಕಾರದಲ್ಲಿ ಸುತ್ತುತ್ತಿದ್ದವು. ರೆಕ್ಕೆ ಬಡಿಯದೇ ಅದು ಹೇಗೆ ಹಾರುತ್ತಾವಲ್ಲ ಎಂದು ಒಮ್ಮೆ, ಅವು ಹಾರುವ ವಿಸ್ತೀರ್ಣ ಶ್ರಾವಸ್ತಿಯನ್ನೂ ನನ್ನ ಗಂಡನ ಮನೆಯನ್ನೂ ಏಕ ಕಾಲದಲ್ಲಿ ಸಂಪರ್ಕಿಸಿದಂತೆ ಭಾಸವಾಗಿ ಮನುಷ್ಯನೂ ಹಾಗೆ ಹಾರುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತಲ್ಲವೇ ಎಂದು ಮತ್ತೊಮ್ಮೆ ಅನ್ನಿಸಿತು. ಯೋಚನಾಲಹರಿಯಲ್ಲಿ ಕಾಲ ಕಳೆಯದೇ ಬೇಗ ಬೇಗ ದೊಡ್ಡಮಗನನ್ನು ಕರೆದೊಯ್ದುಬಿಡಬೇಕು ಎಂಬ ಧಾವಂತದಲ್ಲಿ ಬರುತ್ತಾ, ಸಣ್ಣ ಮಗು ಏನಾದರೂ ಅಳುತ್ತಿದೆಯೇ ಎಂಬ ಕುತೂಹಲದಿಂದ ಒಮ್ಮೆ ಹಿಂದಿರುಗಿ ನೋಡಿದೆ. ಹದ್ದೊಂದು ಮಗುವಿನ ಮೇಲೆ ಹಾರಾಡುತ್ತಾ, ಯಾವ ಕಡೆಯಿಂದ ಆಕ್ರಮಣ ಮಾಡಲಿ ಎನ್ನುವಂತೆ ಹೊಂಚು ಹಾಕುತ್ತಿತ್ತು!



ನಾನಾದರೋ ಜೋರಾಗಿ ಬೊಬ್ಬೆ ಹಾಕುತ್ತಾ, ಹೊಯ್.. ಹೊಯ್.. ಎಂದು ಬೆದರಿಸುತ್ತಾ ಇರಬೇಕಾದರೆ ಇನ್ನೂ ತಡಮಾಡಿದರೆ ನಾನೆಲ್ಲಿ ಬಂದು ತನ್ನ ಬೇಟೆಯನ್ನು ತಡೆಹಿಡಿದುಬಿಡುತ್ತೇನೋ ಎನ್ನುವಂತೆ ಅದ್ಯಾವ ಮಾಯದಲ್ಲೋ ನೆಟ್ಟ ನೇರ ಕೆಳಕ್ಕಿಳಿದು ತನ್ನ ಪಂಜದಿಂದ ಮಗುವಿನ ಪಕ್ಕೆಯನ್ನು ಬಿಡಿಹಿಡಿದು ಮೇಲಕ್ಕೆ ಹೊತ್ತೊಯ್ದೇಬಿಟ್ಟಿತು! ನಾನು ಇನ್ನಷ್ಟು ಮತ್ತಷ್ಟು ಅರ್ಭಟಿಸಿದೆ - ನನ್ನ ಸದ್ದಿಗಾದರೂ ಬೆದರಿ ಮಗುವನ್ನು ಕೈಬಿಡಬಹುದೆಂದು.. ಆದರೆ ಅದು